# ECHO OF HIS CALL

# ಕರೆಯ ಪ್ರತಿಧ್ವನಿ

**KANNADA**

ECHO OF HIS CALL 1969-2019 GOLDEN JUBILEE
REACHING NATIONS

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXVII | YEAR OF OUR LORD JESUS CHRIST, 2025 MAY | No.04


## ಪರಿಶುದ್ಧ ಸತ್ಯವೇದ

ದಯವಿಟ್ಟು ಈ ಕೆಳಗಿನ ವಚನಗಳನ್ನು **ಕಂಠಪಾಠ ಮಾಡಿರಿ.**

**ಯೆಶಾಯ 56:1-5**

1. ಯೆಹೋವನು ಹೀಗನ್ನುತ್ತಾನೆ, ನ್ಯಾಯವನ್ನು ಅನುಸರಿಸಿರಿ. ಧರ್ಮವನ್ನು ಆಚರಿಸಿರಿ, ಏಕೆಂದರೆ ನನ್ನ ವಿಮೋಚನ ಕ್ರಿಯೆಯು ಬೇಗನೆ ಬರುವದು. ನನ್ನ ರಕ್ಷಣ ಧರ್ಮದ ಕಾರ್ಯವು ಶೀಘ್ರವಾಗಿ ವ್ಯಕ್ತವಾಗುವುದು.
2. ಈ ವಿಧಿಯನ್ನು ಕೈಗೊಳ್ಳುವ ಮನುಷ್ಯನು ಧನ್ಯನು. ಇದನ್ನೇ ಭದ್ರವಾಗಿ ಹಿಡಿದು ಸಬ್ಬತ್ ದಿನವನ್ನು ಹೊಲೆ ಮಾಡದೆ ದೇವರ ದಿನವೆಂದು ಆಚರಿಸುತ್ತಾ ಯಾವ ಕೇಡಿಗೂ ಕೈಹಾಕದ ಮಾನವನು ಭಾಗ್ಯವಂತನು.
3. ಯೆಹೋವನು ಅವಲಂಬಿಸಿದ ವಿದೇಶೀಯನು ಯೆಹೋವನು ತನ್ನ ಜನರಿಂದ ನನ್ನನ್ನು ಖಂಡಿತವಾಗಿ ಅಗಲಿಸುವನು ಎಂದು ಮಾತಾಡದಿರಲಿ. ಮತ್ತು ನಪುಂಸಕನು ಅಯ್ಯೋ, ನಾನು ಗೊಡ್ಡುಮರ ಎಂದು ಅಂದುಕೊಳ್ಳದಿರಲಿ.
4. ಯೆಹೋವನು ಹೀಗನ್ನುತ್ತಾನೆ - ಸಬ್ಬತ್ ದಿನಗಳನ್ನು ನನ್ನ ದಿನಗಳೆಂದು ಆಚರಿಸಿ ನನಗೆ ಮೆಚ್ಚಿಕೆಯಾದದ್ದನ್ನು ಕೈಕೊಂಡು ನನ್ನ ಒಡಂಬಡಿಕೆಯನ್ನು ಭದ್ರವಾಗಿ ಹಿಡಿದು ಕೊಂಡಿರುವ ನಪುಂಸಕರಿಗೆ ನನ್ನ ಪ್ರಾಕಾರ ಗಳೊಳಗೆ,
5. ನನ್ನ ಆಲಯದಲ್ಲಿ ಅವರ ಜ್ಞಾಪಕಾರ್ಥವಾಗಿ ಶಿಲೆಯನ್ನಿಟ್ಟು ಹೆಣ್ಣು ಗಂಡು ಮಕ್ಕಳಿಗಿಂತ ಮೇಲಾದ ಹೆಸರುವಾಸಿಯನ್ನು ದಯ ಪಾಲಿಸುವೆನು. ಹೌದು, ಎಂದಿಗೂ ಅಳಿಯದ ಶಾಶ್ವತ ನಾಮವನ್ನು ಅನುಗ್ರಹಿಸುವೆನು.

## ನೀವು ಸವಾಲುಗಳನ್ನು ಎದುರಿಸಲು ಸಾಕಷ್ಟು ಪ್ರಬಲರಾಗಿದ್ದರೆ, ಜಾಗರೂಕರಾಗಿರಿ !

IF YOU ARE STRONG ENOUGH TO FACE CHALLENGES, **BE CAREFUL!**

*ಸಹೋದರಿ. ಏಂಜಲ್*



ಆತನ **ಕರೆಯ ಪ್ರತಿಧ್ವನಿಯ ಸೇವೆಯ** ಎಲ್ಲಾ ಮುಂದುವರಿದ ಕುಟುಂಬಗಳಿಗೆ ಶುಭಾಶಯಗಳು!

ನಮ್ಮ ತಂದೆಯಾದ ದೇವರು ಮತ್ತು ಕರ್ತನಾದ ಯೇಸುಕ್ರಿಸ್ತನಿಂದ ನಿಮಗೆ ಕೃಪೆ ಮತ್ತು ಶಾಂತಿಯುಂಟಾಗಲಿ.

ಇತ್ತೀಚೆಗೆ, ನನ್ನ ಪಾಸ್‌ಪೋರ್ಟ್ ಕಳೆದು ಹೋಗಿತ್ತು, ನಾನು ಎಲ್ಲಾ ಕಡೆಗೆ ಹುಡುಕಿದೆನು ಆದರೆ ಸಿಗಲಿಲ್ಲ. ಅದು ನನ್ನನ್ನು ಹುಚ್ಚನನ್ನಾಗಿ ಮಾಡಿತು! ನಾನು ಎಲ್ಲಿ ಇಟ್ಟಿದ್ದೀನೋ ಎಂಬುವುದು ನನಗೆ ನಿಶ್ಚಿತವಾಗಿತ್ತು. ಆದಾಗ್ಯೂ ನನಗೆ ಹುಡುಕುವುದಕ್ಕೆ ಹೋದೆನು. ಅದು ಕಳೆದು ಹೋಗಿತ್ತು. ನಾನು ಎಲ್ಲಾ ಸಂದುಗಳಲ್ಲಿ ಹುಡುಕಿದೆನು. ಬಹಳ ಚಿಂತೆಗೊಳಗಾದೆನು. ಕಳೆದು ಹೋದ ಪಾಸ್‌ಪೋರ್ಟ್ ನನ್ನ ಆಲೋಚನೆಗಳಲ್ಲಿ ಕೂತುಕೊಂಡಿತು. ನಾನು ಯಾವುದನ್ನು ಕೇಂದ್ರೀಕರಿಸುವುದಕ್ಕೆ ಆಗಲಿಲ್ಲ. ನಿದ್ರೆಯಲ್ಲಿಯಾಗಲಿ ಅಥವಾ ಎಚ್ಚರವಾಗಿರಲಿ. ಬಹಳ ಪ್ರಾಮುಖ್ಯವಾಗಿ, ನನಗೆ ತುರ್ತಾಗಿ ಬೇಕಾಗಿತ್ತು. ಹೊಸ ಪಾಸ್‌ಪೋರ್ಟ್‌ಗೆ ಅರ್ಜಿ ಹಾಕುವುದಕ್ಕೆ

(4ನೇ ಪುಟಕ್ಕೆ)




**Echo of His Call**

***Christian YouTube Channel!***

**An opportunity to pray with Pr. S. Sam Selva Raj!**

Message & Prayer in 5 minutes!!

**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**

★ Please Subscribe and Share ★

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*





**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.


HON. EDITOR-IN-CHIEF

Rev. Angeline S. Kumari, M.A., M.Sc., M.Ed.

EX MANAGING EDITOR

Pastor Alex Samson Sam, B.Th., M.Div.

GENERAL MANAGER

Bro. N. Prakasam, M.A., M.Sc.(C&P), PGDHRM, MBA.

ADMINISTRATION

Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)

EDITORIAL BOARD

Dr. Serena Bevin, M.A., M.Phil., B.Ed.
Sis. Sajini Cherian
Rev. Dr. K.R. Rajasekaran
Rev. Dr. William Robert, Ph.D., DD, D.Lit.



EDITOR, PUBLISHER & PRINTER

Pastor S. SAM SELVA RAJ
Echo of His Call Printers



10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858
95661 31858

E.MAIL

sam@echoofhiscall.org
biblecor@yahoo.co.in

WEBSITES

www.echoofhiscall.org
www.stpaulsmatriculation.org

YOUTUBE CHANNEL

Echo of His Call


**ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು : ಆತನು ನಿನ್ನನ್ನು ಉದ್ಧಾರ ಮಾಡುವನು. ನೀತಿವಂತನನ್ನು ಎಂದಿಗೂ ಕದಲಗೊಡಿಸನು. (ಕೀರ್ತನೆ 55:22)**

ಯೇಸುಕ್ರಿಸ್ತನಲ್ಲಿ ನನ್ನ ಆತ್ಮೀಯರೇ,

ಮಹಿಮೆಯುಳ್ಳ ನಮ್ಮ ಕರ್ತನು ಮತ್ತು ರಕ್ಷಕನಾಗಿರುವ ಯೇಸುಕ್ರಿಸ್ತನ ನಾಮದಲ್ಲಿ ನಿಮ್ಮೆಲ್ಲರಿಗೆ ಶುಭಾಶಯಗಳು!

ಆತನ **ಕರೆಯ ಪ್ರತಿಧ್ವನಿ**ಯ ಹಿಂದಿನ ಸಂಚಿಕೆಯಲ್ಲಿ ನೀವು ಪಡೆದ ಆಶೀರ್ವಾದಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ನಾವು ಆಳವಾಗಿ ಪ್ರಶಂಸಿಸುತ್ತೇವೆ. ನಿಮ್ಮ ಪ್ರಾರ್ಥನೆಗಳು ಮತ್ತು ಬೆಂಬಲ ನಮಗೆ ತುಂಬಾ ಅರ್ಥಪೂರ್ಣವಾಗಿದೆ. ಅವುಗಳನ್ನು ನಾವು ನಿರಂತರವಾಗಿ ಹುಡುಕುತ್ತೇವೆ. ಕರ್ತನು ನಿಮ್ಮನ್ನು ಅಧಿಕವಾಗಿ ಆಶೀರ್ವದಿಸಲಿ!



*Youth Camp at St. Paul's Matriculation School Campus*




*Pr. S. Sam Selva Raj's Speech in Open-Air Meeting*

ದೇವರ ಹೇರಳವಾದ ಕೃಪೆಯಿಂದ, **ಸಂತ ಮೆಟ್ರಿಕ್ಯುಲೇಷನ್ ಶಾಲೆ**ಯ ಅಂಗಳದಲ್ಲಿ ಕಳೆದ ತಿಂಗಳು ಅನೇಕ ಸೇವೆಗಳು ಬಹಳ ಸಫಲವಾಗಿ ನಡೆದವು. ಯೌವ್ವನಸ್ಥರ ಕೂಟ, ಬಹಿರಂಗ ಕೂಟಗಳು, ಮಕ್ಕಳ ಸೇವೆ, ದೇವರ ಸಭೆಯ ಸೇವೆಗಳು ಮತ್ತು ನಮ್ಮ ಶಾಲೆಯ ವಾರ್ಷಿಕೋತ್ಸವದ ಕಾರ್ಯಕ್ರಮಗಳು. ಶಿಶುವಿಹಾರ ವಿದ್ಯಾರ್ಥಿಗಳ ಪದವಿ ದಿನ ಮತ್ತು ಶಾಲಾ ವಾರ್ಷಿಕ ದಿನ ಎಪ್ರಿಲ್ 11 ಮತ್ತು ಎಪ್ರಿಲ್ 17ರಂದು ನಡೆಯಿತು. ಈ ಕೂಟಗಳಾದ್ಯಂತ ಪವಿತ್ರಾತ್ಮನ ಉಪಸ್ಥಿತಿ ಮತ್ತು ಮಾರ್ಗದರ್ಶನವು ಶಕ್ತಿಯುತವಾಗಿ ಸ್ಪಷ್ಟವಾಗಿತ್ತು.

ದೇವರ ಸಭೆಯ ಸೇವೆಗಳು ಮತ್ತು ಮಕ್ಕಳ ಸೇವೆಗಳು ವೆಲಿಚೆರಿಯಲ್ಲಿರುವ **ನೆಹಮೀಯ ಸತ್ಯವೇದ ಕಾಲೇಜ್** ಅಂಗಳದಲ್ಲಿ ನಿರಂತರವಾಗಿ ಅಭಿವೃದ್ಧಿಯಾಗುತ್ತಾ ಇದೆ. ಈ ಕೆಳಗಿನ ಆಯ್ಕೆಗಳೊಂದಿಗೆ ಒಂದು ವರ್ಷದ ಡಿಪ್ಲೋಮಾ ಇನ್ ಥಿಯಾಲ್‌ಜಿ ಕಾರ್ಯಕ್ರಮವು ಜೂನ್ 02, 2025ರಂದು ಪ್ರಾರಂಭವಾಗಲಿದೆ ಎಂದು ಘೋಷಿಸಲು ನಾವು ಸಂತೋಷಪಟ್ಟಿದ್ದೇವೆ.

### ಎ) ವಸತಿ (ಹಿಂದಿ ಮಾಧ್ಯಮ) ವೆಲಿಚರಿ

ಆಯಾ ಪ್ರದೇಶಗಳಲ್ಲಿ ಕರ್ತನ ಸೇವೆ ಮಾಡಲು ಸಿದ್ಧರಿರುವ ಅರ್ಹ ಪುರುಷ ಅಭ್ಯರ್ಥಿಗಳಿಗೆ ತೆರೆಯುವುದು. ಅರ್ಹ ವಿದ್ಯಾರ್ಥಿಗಳಿಗೆ ಪ್ರಾಯೋಜಕತ್ವ ಲಭ್ಯವಿದೆ.

### ಬ) ಸಾಯಂಕಾಲ ಸತ್ಯವೇದ ಕಾಲೇಜು (ತಮಿಳು ಮಾಧ್ಯಮ ವಸತಿ ರಹಿತ).

ಈ ತರಗತಿಗಳು ಸೋಮವಾರ, ಮಂಗಳವಾರ ಮತ್ತು ಗುರುವಾರ ಸಾಯಂಕಾಲ 6:30 ರಿಂದ 8:30ರವರೆಗೆ ನಡೆಯುತ್ತವೆ.

**ಸ್ಥಳಗಳು :** ಚೆಪಾಕ್ ಮತ್ತು ಸಂತೋಷಪುರಂ **ನೆಹಮೀಯ ಸತ್ಯವೇದ ಕಾಲೇಜ್.**

ಇದರ ಜೊತೆಯಲ್ಲಿ, 2025-26 ಶೈಕ್ಷಣಿಕ ವರ್ಷದಿಂದ ವೆಲಿಚೆರಿಯಲ್ಲಿ ತಮಿಳು ಸಾಯಂಕಾಲ ತರಗತಿಗಳು ಪ್ರಾರಂಭವಾಗುತ್ತವೆ.

ಈ ಆತ್ಮೀಕ ಶಿಕ್ಷಣದ ಕಾರ್ಯಕ್ರಮಗಳಿಗೆ ದಯಮಾಡಿ ಪ್ರಾರ್ಥನೆ ಮಾಡಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಅರ್ಹ ಅಭ್ಯರ್ಥಿಗಳನ್ನು ಪರಿಚಯಿಸಬೇಕೆಂದು ನಿಮ್ಮನ್ನು ಪ್ರೋತ್ಸಾಹ ಮಾಡುತ್ತೇವೆ.

### ಆತನ ಕರೆಯ ಪ್ರತಿಧ್ವನಿಯು ಡಿಜಿಟಲೈಜೇಷನ್ :

2026ರಿಂದ, ಆತನ **ಕರೆಯ ಪ್ರತಿಧ್ವನಿ** ಸೇವೆಯನ್ನು ಡಿಜಿಟಲ್ ಸ್ವರೂಪಕ್ಕೆ ಪರಿವರ್ತಿಸಲು ನಾವು ಯೋಜಿಸುತ್ತೇವೆ. ಯಾಕೆಂದರೆ ನಾವು ಸರ್ಕಾರದ ಆದೇಶದ ಪ್ರಕಾರ ಪರಿಷ□ತ ಹೆಚ್ಚಿನ ಅಂಚೆ ಶುಲ್ಕಗಳನ್ನು ಭರಿಸಬೇಕಾಗುತ್ತದೆ. ಅದು ನಮ್ಮ ಹಣಕಾಸಿನ ಸಾಮರ್ಥ್ಯವನ್ನು ಮೀರಿದೆ. ಮುದ್ರಣದ ವೆಚ್ಚಗಳು ಮತ್ತು ಸಾಮಗ್ರಿಗಳ ಬೆಲೆಯು ನಿರಂತರವಾಗಿ ಏರುತ್ತಾ ಇದೆ. ಹಣಕಾಸಿನ ಒತ್ತಡಗಳಿಂದ, ಈ ವೆಚ್ಚಗಳನ್ನು ಸರಿದೂಗಿಸಲು ಕಷ್ಟವಾಗುತ್ತಾ ಇದೆ ಎಂದು ನಾವು ತಿಳಿದು ಕೊಂಡಿದ್ದೇವೆ.

ಎಲ್ಲಾ ಪ್ರಾಮಾಣಿಕ ಓದುಗರಿಗೆ ಪತ್ರಿಕೆಯನ್ನು ನಾವು ಸಾಮಾಜಿಕ ಮಾಧ್ಯಮ, ಇಮೇಲ್, ವಾಟ್ಸಾಪ್, ವಿಶೇಷ ಅಂಚೆ ಮತ್ತು ಕೊರಿಯರ್ ಸೇವೆಗಳ ಮೂಲಕ ವಿತರಿಸುತ್ತೇವೆ.

**ಇದನ್ನು ಪಡೆದುಕೊಳ್ಳಲು ದಯಮಾಡಿ ಈ ಕೆಳಗಿನ ಮಾಹಿತಿಯನ್ನು ನಮಗೆ ಕಳುಹಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.**

1. ನಿಮ್ಮ ಸಂಪೂರ್ಣ ಮತ್ತು ಸರಿಯಾದ ಅಂಚೆ ವಿಳಾಸ.
2. ನಿಮ್ಮ ಸರಿಯಾದ ಫೋನ್ ನಂಬರ್ ಮತ್ತು ವಾಟ್ಸಾಪ್ ನಂಬರ್.
3. ನಿಮ್ಮ ಸರಿಯಾದ ಇಮೇಲ್ (ಇದ್ದರೆ).

ಈ ವಿವರಗಳನ್ನು ಸರಿಯಾಗಿ ಸಲ್ಲಿಸಲಾಗಿದೆಯೇ ಎಂದು ಖಚಿತ ಪಡಿಸಿಕೊಳ್ಳಿ. ಇಲ್ಲವಾದರೆ, ಭವಿಷ್ಯತ್‌ನಲ್ಲಿ ಪತ್ರಿಕೆಗಳು ಪಡೆದು ಕೊಳ್ಳಲು ಆಗುವುದಿಲ್ಲ. ಈ ನವೀಕರಣವು ಆತನ **ಕರೆಯ ಪ್ರತಿಧ್ವನಿ**ಯೊಂದಿಗೆ ಈಗಾಗಲೇ ನಿಯಮಿತವಾಗಿ ಸಂವಹನ ನಡೆಸುತ್ತಿರುವ ಓದುಗರಿಗೆ ಅನ್ವಯಿಸುವುದಿಲ್ಲ. ನಮ್ಮ ಗೌರವಾನ್ವಿತ ಸಂಬಂಧವನ್ನು ಮುಂದುವರಿಸಲು ಮತ್ತು ಸಂರಕ್ಷಿಸಲು ನಾವು ಉತ್ಸುಕರಾಗಿದ್ದೇವೆ.

### ಆತನ ಕರೆಯ ಪ್ರತಿಧ್ವನಿ ಸೇವೆಗಳಿಗಾಗಿ ಪ್ರಾರ್ಥನೆ ಮನವಿಗಳು :

ಈ ಕೆಳಗಿನ ಸೇವೆಗಳಿಗಾಗಿ ನಾವು ಆಸಕ್ತಿಯಿಂದ ನಿಮ್ಮ ಪ್ರಾರ್ಥನೆಗಳನ್ನು ಬೇಡುತ್ತೇವೆ.

### ಯೆಹೋಶುವ ವೀರರು ಅಂತರಾಷ್ಟ್ರೀಯ

1. ಒಂದು ನಿಮಿಷ ಪ್ರಾರ್ಥನೆ ಪ್ರಾರಂಭ **(ಗ್ಲೋಬಲ್ ವಿಷನ್ ಫಾರ್ ಯೂತ್ ಆಂಡ್ ಕಿಡ್ ಕೇರ್).** ಗ್ಲೋಬಲ್ ವಿಷನ್ ಫಾರ್ ಯೂತ್ ಆಂಡ್ ಮಕ್ಕಳು, ಪ್ರತಿದಿನ ರಾತ್ರಿ 10 ಗಂಟೆಗೆ.
2. ಒಂದು ಗಂಟೆ ಪ್ರಾರ್ಥನಾ ಸರಪಳಿ ಜಗತ್ತಿನಲ್ಲಿರುವ ಸಭೆಗಳಿಗಾಗಿ ಮತ್ತು ವಿಶ್ವಾಸಿಗಳಿಗಾಗಿ.
3. ಸೆಮಿನರಿಗಳು, ಕ್ಯಾಂಪ್‌ಗಳು ಮತ್ತು ಕಾರ್ಯಗಾರಗಳು ಅವುಗಳು ಫಲವುಳ್ಳಗಳು ಮತ್ತು ಆತ್ಮ ನಡೆಸುವಿಕೆ.

ನಮ್ಮ ಅನೇಕ ಪಾಲುಗಾರರು ಮತ್ತು ಜಗತ್ತಿನಾದ್ಯಂತ ಇರುವ ಮಿಶನರಿಗಳು. ನಮ್ಮ ಕರ್ತನಾದ ಯೇಸುಕ್ರಿಸ್ತನ ಸೇವೆ ಮಾಡಲು ಈ ಸೇವೆಯಲ್ಲಿ ಪ್ರವೇಶವಾಗಲು ನಿಮ್ಮನ್ನು ಪ್ರೀತಿಯಿಂದ ಆಹ್ವಾನಿಸುತ್ತೇವೆ!

### ರಜಾಕಾಲದ ಸತ್ಯವೇದ ಶಾಲೆಗಳು (ವಿಬಿಎಸ್) ಮೇ 2025

ನಮ್ಮ ಸಭೆಗಳಲ್ಲಿ ಮತ್ತು ಬೇರೆ ಸಭೆಗಳಲ್ಲಿ ಈ ತಿಂಗಳು ನಡೆಯುವ ರಜಾಕಾಲದ ಸತ್ಯವೇದ ಶಾಲೆಗಳಿಗಾಗಿ ದಯಮಾಡಿ ಪ್ರಾರ್ಥಿಸಿರಿ.

ಚೆನ್ನೈನಲ್ಲಿರುವ ನಮ್ಮ ಸಭೆಯ ವಿಬಿಸ್ ವೇಳಾಪಟ್ಟಿ :

| | | | |
|---|---|---|---|
| 1. | ಸಂತೋಷಪುರಂ | - | ಎಪ್ರಿಲ್ 25 ರಿಂದ ಮೇ 01 |
| 2. | ವೆಲಿಚೆರಿ | - | ಎಪ್ರಿಲ್ 30 ರಿಂದ ಮೇ 05 |
| 3. | ಬಾಲಾಜಿ ನಗರ, ಪಲ್ಲಿಕರಾನಿ | - | ಎಪ್ರಿಲ್ 30 ರಿಂದ ಮೇ 05 |
| 4. | ಚೆಪಾಕ್ | - | ಮೇ 06 ರಿಂದ ಮೇ 12 |

ಸಹೋದರರೇ, ನಮಗಾಗಿ ಪ್ರಾರ್ಥಿಸಿರಿ.

ಆತನ ಸೇವೆಯಲ್ಲಿ
**ಆತನ ಕರೆಯ ಪ್ರತಿಧ್ವನಿಯ ತಂಡ**
E.mail : sam@echoofhiscall.org


**URGENT NEED**
**Teachers (All Subjects) for**
**ST. PAUL'S MATRICULATION SCHOOL,**
**An *Echo of His Call* Institution**
**Vijayanagaram, Medavakkam, Chennai - 100.**

We need well qualified, experienced, dedicated, hard working and mission oriented Christians.
Apply with Bio-data to
E.mail: sam@echoofhiscall.org
WhatsApp: (+91) 98412 71858





**VERY URGENT NOTICE!**

There may be unavoidable disruptions in the postal dispatch of **Echo of His Call** in the near future. If you wish to continue receiving **Echo of His Call** without interruption, please send us your name, address, email, and WhatsApp number via letter, email, phone call, or SMS/WhatsApp message immediately.

Your support helps us serve you better!

**Our address:**

**ECHO OF HIS CALL,**
10, Mohammed Abdullah 2nd Street, Chepauk, Chennai-600 005, India
Cell: (+91) 98412 71858 / 98410 71858 E.mail: sam@echoofhiscall.org

(1ನೇ ಪುಟದಿಂದ)

ನನ್ನ ಹತ್ತಿರ ಸಮಯವಿರಲಿಲ್ಲ ಅಥವಾ ಅದನ್ನು ನಂತರ ಹುಡುಕಲು ಶಾಂತವಾದ ವಿಧಾನವನ್ನು ತೆಗೆದುಕೊಳ್ಳುವದಕ್ಕೆ.

ನಾನು ಉದ್ರಿಕ್ತವಾಗಿ ನನ್ನ ಮನೆಯನ್ನು ಹುಡುಕುತ್ತಿದಂತೆ, ನನಗೆ ಲುಕ 15 ನನಗೆ ಜ್ಞಾಪಕ ಬಂದಿತು. **ಕಳೆದು ಹೋದ ಕುರಿಮರಿಯ ಸಾಮ್ಯ, ಕಳೆದ ಹೋದ ನಾಣ್ಯ, ಮತ್ತು ತಪ್ಪಿಹೋದ ಮಗ.** ಪ್ರತಿಸಾರಿ ನಾನು ಕಳೆದು ಹೋದ ಕುರಿಮರಿಯ ಸಾಮ್ಯವನ್ನು ಓದುವಾಗ, ನನಗೆ ಆಶ್ಚರ್ಯವಾಗುತ್ತದೆ. ಯಾಕೆ ಕುರುಬನು 99 ಕುರಿಗಳನ್ನು ಬಿಟ್ಟು ಹೋದನು? ಆತನಿಗೆ 99 ಕುರಿಗಳ ಬಗ್ಗೆ ಚಿಂತೆ ಇರಲಿಲ್ಲವಾ? ಕಳೆದು ಹೋದ ಕುರಿಯು ಅಮೂಲ್ಯವಾಗಿರಬೇಕು ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ಇನ್ನೂ, ಅವನು 99ರ ಹಿಂದೆ ಯಾಕೆ ಓಡುತ್ತಾನೆ. ಅವುಗಳ ಬಗ್ಗೆ ನೀವು ಎಂದಾದರೂ ಆಶ್ಚರ್ಯಪಟ್ಟಿದ್ದೀರಾ? **ತೊಂಭತ್ತೊಂಭತ್ತು, ಒಂಬತ್ತು ಪಾವಲಿಗಳು ಮತ್ತು ಹಿರಿಯ ಸಹೋದರ.** 99:9:1.

ಇದೇ ತರಹದ ಸನ್ನಿವೇಶದಲ್ಲಿ ನೀವು ಇದ್ದರೆ, ಒಂದನ್ನು ಹುಡುಕುವುದಕ್ಕಾಗಿ ತೊಂಭತ್ತೊಂಭತ್ತನ್ನು ಬಿಟ್ಟು ಹೋಗುತ್ತೀರಾ? ಅದು ಮಾತ್ರವಲ್ಲದೇ

ಅವುಗಳನ್ನು ಬಿಡುತ್ತಾನೆ. ಅವುಗಳನ್ನು ಅರಣ್ಯದಲ್ಲಿ
ಬಿಡುತ್ತಾನೆ. ಅದು ನನ್ನನ್ನು ಇನ್ನೂ ಆಳವಾಗಿ ಆಲೋಚನೆಯನ್ನು ಮಾಡುವಂತೆ ಮಾಡಿತು. ಅದು ಸುರಕ್ಷತೆಯ ಸ್ಥಳವಾಗಿರಲಿಲ್ಲ. ಅವುಗಳನ್ನು ಹಟ್ಟಿಯಲ್ಲಿ ಬಿಡಲಿಲ್ಲ ಅಥವಾ ಸುರಕ್ಷತೆಯಲ್ಲಿ. ಅವುಗಳು ಹಟ್ಟಿಯ ಹೊರಗಡೆ ಇದ್ದವು. ಅರಣ್ಯ ಮೃಗಗಳಿಂದ ಸುತ್ತುವರಿದಿದ್ದವು ಮತ್ತು ಬೇರೆ

ಅಪಾಯಗಳಿಂದ ತೊಂಭತ್ತೊಂಭತ್ತನ್ನು ಹುಡುಕುವುದರಲ್ಲಿ ಕೊಳ್ಳುತ್ತಿದ್ದನು.

ನಾನು ಆಲೋಚನೆ ಮಾಡಿದಾಗ ಹಾಗೆ ಯಾರಾದರೂ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಕಳೆದು ಹೋದ ಕುರಿಯು ಯುವ ಮತ್ತು ಕುತೂಹಲ, ಹುಡುಕುವುದರಲ್ಲಿ ಉತ್ಸಾಹವುಳ್ಳದಾಗಿರಬಹುದು. ಪ್ರಕ್ರಿಯೆಯಲ್ಲಿ ಸರಳವಾಗಿ ಕಳೆದು ಹೋಗಿದೆ. ಅಥವಾ ಬಹುಶಃ ಅದು ದಂಗೆ ಮತ್ತು ಅವಿಧೇಯರಾಗಿರಬಹುದು. ಯಾವಾಗಲೂ ದೂರವಿರುವುದು. ಕುರುಬನ ನಡೆಸುವಿಕೆಯನ್ನು ತಿರಸ್ಕಾರ ಮಾಡುವುದು.

ಕಾರಣ ಏನೇ ಇರಲಿ, ಕುರುಬನು ತೊಂಭತ್ತೊಂಭತ್ತನ್ನು ಅರಣ್ಯದಲ್ಲಿ ಬಡ ಮತ್ತು ದುರ್ಬಲವಾದ ಒಂದರ ಹಿಂದೆ ಹೋಗುವುದಕ್ಕೆ ಸಿದ್ಧನಾಗಿದ್ದನು. ಈ ಒಂದು ಆಲೋಚನೆಯು ನನ್ನ ಮನಸ್ಸಿನಲ್ಲಿ ಅನೇಕ ದಿನಗಳಿಂದ ಇತ್ತು. ಅವನು ಆ ಆಯ್ಕೆಯನ್ನು ಮಾಡಲು ಒಂದು ಕಾರಣವಿರಬಹುದು.

## 99ರಲ್ಲಿ ಕುರುಬನ ಭರವಸೆ :



## 1. ಐಕ್ಯತೆಯ ಶಕ್ತಿ!

99ರಲ್ಲಿ ಕುರುಬನು ಅವುಗಳನ್ನು ತೆರೆದ ಅರಣ್ಯದಲ್ಲಿ ಬಿಡುವ ಭರವಸೆಯು ಅಪಾರವಾದದ್ದು. ಅವುಗಳು ಒಬ್ಬರಿಗೊಬ್ಬರು ಹಿಂಭಾಗವನ್ನು ಹೊಂದಿದ್ದಾರೆಂದು ಅವನು ತಿಳಿದಿದ್ದನು-ಐಕ್ಯತೆಯಲ್ಲಿ ಒಟ್ಟಿಗೆ ಸೇರಿಕೊಂಡರು, ಎಲ್ಲಾ ಸಮಯದಲ್ಲಿ ಒಬ್ಬರನ್ನೊಬ್ಬರು ಬೆಂಬಲಿಸಲು ಮತ್ತು ಸಮರ್ಥಿಸಲು ಬದ್ಧರಾಗಿದ್ದಾರೆ. ಅಪಾಯಗಳನ್ನು ಎದುರಿಸುವ ಸಮಯದಲ್ಲಿ ಕೂಡ ಅವುಗಳು ಅಸಾಧಾರಣ ಶಕ್ತಿಯಾಗಿ ಒಂದಾಗಬಹುದು.



*The power of unity!*

ಕುರುಬನು ಐಕ್ಯತೆಯ ಶಕ್ತಿಯನ್ನು ಅವುಗಳಿಗೆ ಚೆನ್ನಾಗಿ ತರಬೇತಿಗೊಳಿಸಿದ್ದಾನೆಂದು ನನಗೆ ನಿಶ್ಚಯವೆಂದು ಅನಿಸುತ್ತದೆ. ಒಂದು ವೇಳೆ ಒಂದರ ಮೇಲೆ ಆಕ್ರಮಣ ಮಾಡಿದರೆ, ಇನ್ನೂ ಬೇರೆ 98 ತಕ್ಷಣವೇ ಸಹಾಯಕ್ಕೆ ಓಡಿ ಹೋಗುತ್ತವೆ. ತೀವ್ರವಾದ ರಕ್ಷಣಾತ್ಮಕ, ಅವರ ರಕ್ಷೆಯು ಅಚಲವಾಗಿದೆ. ಐಕ್ಯತೆಯಲ್ಲಿ ದೊಡ್ಡ ಶಕ್ತಿ ಇದೆ. ಕಳೆದು ಹೋದದ್ದು ದುರ್ಬಲ ಪೂರ್ಣವಾಗಿ ಏಕಾಂಗಿಯಾಗಿ ಇದೆ ಎಂದು ಕುರುಬನು ಕೂಡ ಅರ್ಥ ಮಾಡಿಕೊಂಡನು. ಅದಕ್ಕೆ ಯಾರು ಕೂಡ ರಕ್ಷಕರು ಇಲ್ಲ ಅಥವಾ ಬೆಂಬಲ. ಉಳಿದುಕೊಳ್ಳುವ ಅವಕಾಶಗಳು ಬಹಳ ಕಡಿಮೆ. ಕೇವಲ ಹೊರಗಿನ ಬೆದರಿಕೆಗಳು ಮಾತ್ರವಲ್ಲದೇ, ಆದರೆ ಏಕಾಂಗಿಯ ಭಾರ ಕೂಡ. ಏಕಾಂಗಿಯಾಗಿರುವುದು ಬಹಳ ಅಪಾಯಕಾರಿಯಾಗಿದೆ. ಅದಕ್ಕಾಗಿ ಸತ್ಯವೇದವು ನಮಗೆ ಪ್ರೋತ್ಸಾಹಿಸುತ್ತದೆ ಐಕ್ಯತೆಯಲ್ಲಿ ಇರಿ ಎಂದು.

**ಇದಲ್ಲದೆ ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವುದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವುದೆಂದು ನಿಮಗೆ ಹೇಳುತ್ತೇನೆ.** (ಮತ್ತಾಯ 18:19).

**ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು.** (ಮತ್ತಾಯ 18:20).

**ಆಹಾ, ಸಹೋದರರು ಒಂದಾಗಿರುವುದು ಎಷ್ಟೋ ರಮ್ಯವಾದದ್ದು!** (ಕೀರ್ತನೆ 133:1).

ಕೆಲವು ಸಮಯಗಳಲ್ಲಿ, ನಮ್ಮ ಮೌಲ್ಯಗಳನ್ನು ಹಂಚಿಕೊಳ್ಳದ, ನಮ್ಮನ್ನು ಪ್ರಶಂಸಿಸದ ಅಥವಾ ನಮ್ಮನ್ನು ಪ್ರಾಮಾಣಿಕವಾಗಿ ಪ್ರೀತಿಸುವ ಜನರ ಸುತ್ತ ಇರುವುದಕ್ಕಿಂತ ಏಕಾಂಗಿಯಾಗಿರುವುದು ಉತ್ತಮ ಎಂದು ನಾವು ಭಾವಿಸುತ್ತೇವೆ. ವಿಶೇಷವಾಗಿ ನಮಗೆ ಹತ್ತಿರದವರು ನಮಗೆ ದ್ರೋಹ ಮತ್ತು ನೋಯಿಸಿದರ ನಮಗೆ ನೋವು ವುಂಟಾಗುತ್ತದೆ. ಮತ್ತೆ ಯಾರದರ ಮೇಲೆ ಭರವಸೆ ಇಡುವುದು ಕಷ್ಟಕರವಾಗುತ್ತದೆ.

ಪ್ರೀತಿಯ ಸಹೋದರ ಮತ್ತು ಸಹೋದರಿಯರೇ, ಈ ರೀತಿಯಾಗಿ ನೀವು ಅನುಭವಿಸಿದ್ದರೆ ಅಥವಾ ಇದೇ ರೀತಿಯಾಗಿ ಹಾದು ಹೋಗುತ್ತಾ ಇದ್ದರೆ ಕರ್ತನು ನಿಮ್ಮ ಗಾಯಗಳನ್ನು ಗುಣಪಡಿಸುವುದಕ್ಕಾಗಿ ನಾನು ಪ್ರಾರ್ಥನೆ ಮಾಡುತ್ತೇನೆ. ಯೇಸುಕ್ರಿಸ್ತನು ಸ್ವತಃ ದ್ರೋಹಗಳನ್ನು ಶಿಲುಬೆಯ ಹಾದಿಯಲ್ಲಿ ಸಹಿಸಿಕೊಂಡನು. ಆದ್ದರಿಂದ, ಆತನು ನಿಮ್ಮ ನೋವು, ನಾಚಿಕೆ ಮತ್ತು ಅನುಮಾನಗಳನ್ನು ಅರ್ಥ ಮಾಡಿಕೊಳ್ಳುತ್ತಾನೆ.

ಹೌದು, ಈ ಲೋಕದಲ್ಲಿರುವ ಜನರನ್ನು ನಂಬುವುದು ಬಹಳ ಕಷ್ಟಕರ, ದುಃಖದ ಸಂಗತಿ. ಈ ಒಂದು ಕಾರಣದಿಂದ ಅನೇಕ ಜನರು ಸಭೆಗೆ ಹಾಜರಿಯಾಗುವುದಕ್ಕೆ ಹಿಂಜರಿಯುತ್ತಾರೆ. ಅಲ್ಲಿರುವ ಜನರಿಂದ ನೀವು ಸಭೆಗೆ ಹೋಗುವುದನ್ನು ಬಿಟ್ಟರೆ, ನಾನು ನಿಮಗೆ ಪ್ರೋತ್ಸಾಹ ಮಾಡುತ್ತೇನೆ- ದಯಮಾಡಿ ಹೋಗಿರಿ! ಇದು ಕೇವಲ ಸಲಹೆ ಅಲ್ಲ. ಆದರೆ ದೇವರಿಂದ ಆಜ್ಞೆಯಾಗಿದೆ.

ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ. (ಇಬ್ರಿಯ 10:25).

ನಿಮ್ಮನ್ನು ನೀವು ಸಭೆಯಿಂದ ದೂರ ಮಾಡಿಕೊಳ್ಳಬೇಡಿರಿ. ಜ್ಞಾಪಕದಲ್ಲಿ ಇಟ್ಟುಕೊಳ್ಳಿರಿ. ನಾವು ಅಪರಿಪೂರ್ಣ ಲೋಕದಲ್ಲಿ ಅಪರಿಪೂರ್ಣ ಜನರ ಮಧ್ಯದಲ್ಲಿ ವಾಸಿಸುತ್ತಾ ಇದ್ದೇವೆ. ಆದರೆ ಪರಿಪೂರ್ಣ ದೇವರು ಪ್ರೀತಿಸುವ ಕೃಪೆಯನ್ನು ನಮಗೆ ಕೊಡುತ್ತಾನೆ. ವಿವೇಚಿಸುವ ಜ್ಞಾನವನ್ನು

(6ನೇ ಪುಟಕ್ಕೆ)

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು

**ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)**
**ತ್ವರಿತಗೊಳಿಸುವುದು (II ತಿಮೋಥಿ. 1:6)**

## ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು

**19 ಎಪ್ರಿಲ್ 2025 ರಿಂದ 18 ಮೇ 2025 ರ ವರೆಗೆ**

(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)



### ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

ಮೇ 19 : ಮಕ್ಕಳಿಗಾಗಿ ರಜಾ ಕಾಲದ **ಸತ್ಯವೇದ ಶಾಲೆ**ಗಳ ಮೇಲೆ ಆತನ ಹೇರಳವಾದ ದೇವರ ಆಶೀರ್ವಾದಕ್ಕಾಗಿ.

ಮೇ 20 : ನಮ್ಮ **ಸಂತ ಪೌಲ್‌ಮೇಟ್ರಿಕೇಲ್‌ಷನ್ ಶಾಲೆ, ನೆಹಮೀಯ ಸತ್ಯವೇದ ಕಾಲೇಜುಗಳು** ಮತ್ತು **ದೈವಶಾಸ್ತ್ರದ ದೂರ ಶಿಕ್ಷಣ ಕೋರ್ಸ್‌ಗಳು.** ಅಗತ್ಯವಿರುವವರಿಗೆ ಸೇವೆಮಾಡುವ ಸಮರ್ಪಣೆಗಾಗಿ.

ಮೇ 21 : ನಮ್ಮ ಭಾಷಾಂತಕರು, ಸಹ ಸಂಪಾದಕರು, ರಾಜ್ಯ ಆಯೋಜಕರು ಮತ್ತು ಅವರ ಕುಟುಂಬಗಳ ಮೇಲೆ ದೈವತ್ವದ ದಯೆಗಾಗಿ.

ಮೇ 22 : ನಮ್ಮ ಮುಖ್ಯ ಸಭೆ ಮತ್ತು ಶಾಖ ಸಭೆಗಳ ಎಲ್ಲಾ ಸದಸ್ಯರುಗಳ ಮೇಲೆ ಆತನ ಆಶೀರ್ವಾದಕ್ಕಾಗಿ.

ಮೇ 23 : ರಾಜಕೀಯ ಮತ್ತು ಧಾರ್ಮಿಕ ವಿರೋಧಗಳ ನಡುವೆ ಕೂಡ ನಮ್ಮ ಕ್ರೈಸ್ತ ಸೇವೆಗಳು ಬೆಳೆಯುತ್ತಿರುವುದಕ್ಕಾಗಿ.

ಮೇ 24 : ಅವ್ಯವಸ್ಥೆ ಮತ್ತು ಯುದ್ಧದ ಬೆದರಿಕೆಯ ಮಧ್ಯೆ ಎಲ್ಲಾ ರಾಷ್ಟ್ರಗಳ ಮೇಲೆ ದೇವರ ದೈವಿಕ ರಕ್ಷಣೆ.

ಮೇ 25 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವಂತ ಸಹಭಾಗಿಗಳು ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳ ಅವರ ಕುಟುಂಬಗಳ ಮೇಲೆ ದೇವರ ದಯೆಗಾಗಿ.

ಮೇ 26 : ನಮ್ಮ **5 ನಿಮಿಷಗಳ ಯೂಟುಬ್ ಸಂದೇಶ**ಗಳ ಸಾಕ್ಷಿಗಳು ಮತ್ತು ಚಂದದಾರರು ಹೆಚ್ಚಳವಾಗುತ್ತಿರುವುದಕ್ಕಾಗಿ.

ಮೇ 27 : ಮಾರ್ಚ್ 23, 2025ರಂದು **ಸಂತ ಪೌಲ್ ಮೆಟ್ರಿಕ್ಯುಲೇಶನ್ ಶಾಲೆ**ಯಲ್ಲಿ ನಡೆದ ವಿಮೋಚನೆ ಬಿಡುಗಡೆಯ ಕೂಟಗಳ ಮೇಲೆ ಆತನ ಆಶೀರ್ವಾದಗಳಿಗಾಗಿ.

ಮೇ 28 : ನಮ್ಮ **ಬೈಬಲ್ ಕೋರ್ ಮತ್ತು ದೈವಶಾಸ್ತ್ರದ ದೂರ ಶಿಕ್ಷಣ ಕೋರ್ಸ್**ಗಳ ಪರಿಣಾಮಕ್ಕಾಗಿ.

ಮೇ 29 : ನಮ್ಮ ಸೇವೆಯ ಎಲ್ಲಾ ಅಗತ್ಯತೆಗಳನ್ನು ದೇವರು ಅದ್ಭುತವಾಗಿ ಒದಗಿಸಿದ್ದಾನೆ.

ಮೇ 30 : ಸಮಾಜದ ಎಲ್ಲಾ ಕ್ಷೇತ್ರಗಳಾದ್ಯಂತ ಮಹಿಳೆಯರ ಸಬಲೀಕರಣಕ್ಕಾಗಿ ವಕಾಲತ್ತು.

ಮೇ 31 : ನಮ್ಮ ಆತನ **ಕರೆಯ ಪ್ರತಿಧ್ವನಿಯ ಸೇವೆ**ಯ ಸಿಬ್ಬಂದಿ ವರ್ಗ ಮತ್ತು ಅವರ ಕುಟುಂಬಗಳ ರಕ್ಷಣೆ ಮತ್ತು ಆರೋಗ್ಯಕ್ಕಾಗಿ.

ಜೂನ್ 01 : **ಸಂತ ಪೌಲ್‌ಮೆಟ್ರಿಕ್ಯುಲೇಷನ್ ಶಾಲೆ** ಮತ್ತು **ನೆಹಮೀಯ ಸತ್ಯವೇದ ಕಾಲೇಜಿ**ನ 2025-26ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶಗಳು ಸಫಲವಾಗಿದ್ದಕ್ಕೆ.

ಜೂನ್ 02 : ಕ್ರಮವಾಗಿ ನಾವು ದೈವಶಾಸ್ತ್ರ ಸೆಮಿನರಿಗಳನ್ನು ಆಯೋಜಿಸುವಂತೆ ದೇವರು ನಮಗೆ ಕೃಪೆ ತೋರಿಸಿದ್ದಾನೆ.

ಜೂನ್ 03 : 1969ರಿಂದ ಪತ್ರಿಕಾ ಸೇವೆಯನ್ನು ನಮ್ಮ ಸಮರ್ಪಣೆಯ ಬಗ್ಗೆ ಆತನ ಮುಂದುವರಿದ ಆಶೀರ್ವಾದಕ್ಕಾಗಿ.

### ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

ಜೂನ್ 04 : ಎಲ್ಲಾ ದೇಶಗಳ ಮಧ್ಯೆ ಶಾಂತಿ ಮತ್ತು ಆರ್ಥಿಕ ಬೆಳವಣಿಗೆಗಾಗಿ.

ಜೂನ್ 05 : ನಮ್ಮ ಸೇವೆಗಳ ವಿಸ್ತರಣೆ ವಿವಿಧ ಸಾಮರ್ಥ್ಯಗಳಲ್ಲಿ ಮತ್ತು ಆಯಾಮಗಳಲ್ಲಿ.

ಜೂನ್ 06 : ದೇವರ ವಾಕ್ಯಕ್ಕೆ ಅನುಸರವಾಗಿ ಕ್ರೈಸ್ತರು ಜೀವಿಸುವಂತೆ ಮತ್ತು ಕ್ರಿಸ್ತನ ಮನಸ್ಸನ್ನು ಬೆಳೆಸಿಕೊಳ್ಳುವಂತೆ.

ಜೂನ್ 07 : ಪ್ರಪಂಚದಾದ್ಯಂತ ಇರುವ ಎಲ್ಲಾ ಕ್ರೈಸ್ತ ಶಿಕ್ಷಣ ಸಂಸ್ಥೆಗಳಲ್ಲಿ ಒಳ್ಳೆಯ ಹೆಸರು ಮತ್ತು ಪ್ರಾಮಾಣಿಕತೆಗಾಗಿ.

ಜೂನ್ 08 : ನಮ್ಮ ಸಹಕಾರಿಗಳಿಗಾಗಿ, ಹಿತೈಷಿಗಳು ಮತ್ತು ತಮ್ಮ ಪ್ರಾರ್ಥನೆಗಳ ಮೂಲಕವಾಗಿ ನಮ್ಮ ಸೇವೆಯನ್ನು ಸಲ್ಲಿಸಿರುವ ಸ್ನೇಹಿತರಿ ಗಳಿಗಾಗಿ ಮತ್ತು ಹಣಕಾಸಿನ ದೇಣಿಗೆಗಳಿಗಾಗಿ.

ಜೂನ್ 09 : ಭೂಮಿಯ ಮೇಲೆ ತನ್ನ ರಾಜ್ಯವನ್ನು ಮುನ್ನಡೆಸಲು ತಾಜ ದರ್ಶನಗಳಿಗಾಗಿ.

ಜೂನ್ 10 : ಆಧ್ಯಾತ್ಮಿಕ ಮತ್ತು ದೈಹಿಕ ಬೆದರಿಕೆಗಳ ವಿರುದ್ಧ ಎಲ್ಲಾ ಸಭೆಗಳಿಗೆ ದೈವಿಕ ಸಂರಕ್ಷಣೆ.

ಜೂನ್ 11 : ಎಲ್ಲಾ ಕುಟುಂಬಗಳಲ್ಲಿ ಶಾಂತಿ ಮತ್ತು ಐಕ್ಯತೆಗಾಗಿ.

ಜೂನ್ 12 : ಪ್ರಪಂಚದ ಎಲ್ಲಾ ಟಿವಿ ಮತ್ತು ಯುಟೂಬ್ ಪ್ರಸಂಗಿಗಳಿಗೆ ಆತನ ಅಭಿಷೇಕ ಮತ್ತು ನಡೆಸುವಿಕೆಗಾಗಿ.

ಜೂನ್ 13 : ನಮ್ಮ ಹಿರಿಯ ಸಭಾಪಾಲಕರು ಮತ್ತು ಅವರ ಕುಟುಂಬಗಳ ಒಳ್ಳೆಯ ಆರೋಗ್ಯಕ್ಕಾಗಿ ಮತ್ತು ದೈವಿಕ ಸಂರಕ್ಷಣೆಗಾಗಿ.

ಜೂನ್ 14 : ಪ್ರಪಂಚದಲ್ಲಿರುವ ಎಲ್ಲಾ ದೇಶಗಳ ಎಲ್ಲಾ ಆಯಾಮಗಳಲ್ಲಿ ಐಕ್ಯತೆ ಮತ್ತು ಬೆಳವಣಿಗೆಗಾಗಿ.

ಜೂನ್ 15 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವಂತ ಸಹಭಾಗಿಗಳು ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳ ಅವರ ಕುಟುಂಬಗಳ ಮೇಲೆ ದೇವರ ದಯೆಗಾಗಿ.

ಜೂನ್ 16 : ನಮ್ಮ ಎಲ್ಲಾ ಉದ್ಯೋಗಿಗಳ ಮತ್ತು ಅವರ ಕುಟುಂಬಗಳ ಒಳ್ಳೆಯ ಆರೋಗ್ಯ ಮತ್ತು ಕಾಳಜಿಗಾಗಿ.

ಜೂನ್ 17 : ಎಲ್ಲಾ ರಾಷ್ಟ್ರಪತಿಗಳಿಗಾಗಿ, ಪ್ರಧಾನಮಂತ್ರಿಗಳಿಗಾಗಿ ಮತ್ತು ಪ್ರಪಂಚದಾದ್ಯಂತ ಇರುವ ಸರ್ಕಾರಿ ಅಧಿಕಾರಿಗಳಿಗಾಗಿ, ಅವರು ಜ್ಞಾನವುಳ್ಳವರಾಗಿ ಮತ್ತು ಪ್ರಾಮಾಣಿಕತೆಯನ್ನು ಪಾಲಿಸುವಂತೆ.

ಜೂನ್ 18 : ವೈರಲ್ ಜ್ವರ ಮತ್ತು ಉದಯೋನ್ಮುಖ ಸಾಂಕ್ರಾಮಿಕ ಕಾಯಿಲೆಗಳ ವಿರುದ್ಧ ದೈವಿಕ ರಕ್ಷಣೆಗಾಗಿ.

(4ನೇ ಪುಟದಿಂದ)

ಕೊಡುತ್ತಾನೆ. ಅಪೋಸ್ತಲರ ಕೃತ್ಯಗಳು 12ರಲ್ಲಿ, ಸಭೆಯು ಒಗ್ಗಟ್ಟಾಗಿ ಪ್ರಾರ್ಥಿಸಿದಾಗ ದೇವರು ಅದ್ಭುತವಾಗಿ ಪೇತ್ರನಿಗೆ ಸೆರೆಮನೆಯ ಬಾಗಿಲುಗಳನ್ನು ತೆರೆದನು. ಪ್ರಾರ್ಥನೆ ಮತ್ತು ಸಂಗತಿಯಲ್ಲಿ ನಂಬುವವರು ಒಂದಾದಾಗ ಹೆಚ್ಚು ಶಕ್ತಿ ಬರುತ್ತದೆ.



*God miraculously opened the prison doors for Peter.*

ಪ್ರೀತಿಯು ಎಲ್ಲವನ್ನು ಮುಚ್ಚಿಕೊಳ್ಳುತ್ತದೆ. ನಾವು ಒಬ್ಬರಿಗೊಬ್ಬರು ಬೇಕಾಗಿದ್ದೇವೆ. ಅಂಗ್ಲಭಾಷೆಯಲ್ಲಿ ಒಂದು ಸುಂದರವಾದ ಹೇಳಿಕೆ ಇದೆ, ನೀವು ವೇಗವಾಗಿ ನಡೆಯಬೇಕಾದರೆ, ಏಕಾಂಗಿಯಾಗಿ ನಡೆಯಿರಿ. ಆದರೆ ದೂರ ನಡೆಯ ಬೇಕಾದರೆ, ಯಾರೊಂದಿಗಾದರೂ ನಡೆಯಿರಿ. ಆದಾಗ್ಯೂ, ನೀವು ಯಾರೊಂದಿಗೆ ನಡೆಯಲು ಆಯ್ಕೆ ಮಾಡಿಕೊಳ್ಳುತ್ತೀರಿ ಮತ್ತು ಸಂಗತಿಯನ್ನು ಹೊಂದಿರಿ, ಯಾಕೆಂದರೆ ಅವರು ನಿಮ್ಮ ಮೇಲೆ ಪ್ರಭಾವ ಬರುತ್ತಾರೆ. ಇದಕ್ಕಾಗಿಯೇ ಏಳಿಗೆ ಹೊಂದಲು ಕೆಲವು ಸಂಘಗಳನ್ನು ತಪ್ಪಿಸಲು ಕೀರ್ತನೆ 1 ನಮಗೆ ಕಲಿಸುತ್ತದೆ. ಐಕ್ಯತೆಯು ಅವಶ್ಯವಾಗಿದೆ. ಆದರೆ ತಪ್ಪಾದ ಸಂಗತಿಯು ನಾಶಕ್ಕೆ ಕಾರಣ ವಾಗುತ್ತದೆ.

ಯೇಸುಕ್ರಿಸ್ತನು ಅದ್ಭುತವಾದ ಪ್ರಾರ್ಥನೆಯನ್ನು ಅರ್ಪಿಸುತ್ತಾನೆ. ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ. **ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣ ಸಿದ್ಧಿಗೆ ಬರುವುದರಿಂದ ನೀನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದು ಬರುವುದು.** (ಯೋಹಾನ 17:22-23).

ಕಳೆದು ಹೋದ ಕುರಿಗಳ ಕುರುಬನ ಅನ್ವೇಷಣೆಯು ದೇವರ ಆಮೂಲಾಗ್ರ ಕರುಣೆಯ ಪ್ರಬಲ ಚಿತ್ರಣವಾಗಿದ್ದರೂ, ತೊಂಬತ್ತೊಂಬತ್ತು ದೊಡ್ಡ ಸಮುದಾಯವನ್ನು ಪ್ರತಿನಿಧಿಸುತ್ತದೆ. ಇದು ಪುನಃಸ್ಥಾಪನೆಯಲ್ಲಿ ಸಂತೋಷ ಪಡುವ ಉದ್ದೇಶದಿಂದ. ಒಬ್ಬ ಸದಸ್ಯನು ಹಿಂದಿರುಗುವಾಗ, ಸಂತೋಷವು ಕೇವಲ ರಕ್ಷಿಸಲ್ಪಟ್ಟವರಿಗೆ ಮಾತ್ರವಲ್ಲ, ಸಂಪೂರ್ಣ ಹಿಂಡುಗಳಿಗೆ. ದೇವರು ಪ್ರತಿಯೊಬ್ಬ ವ್ಯಕ್ತಿಗಳನ್ನು ಮೌಲ್ಯ ಮಾಡುವುದನ್ನು ನಮಗೆ ಕಲಿಸುತ್ತದೆ ಮತ್ತು ಆ ಪುನಃ ಸ್ಥಾಪನೆಯು ಒಂದು ಸಮುದಾಯದ ಘಟನೆಯಾಗಿದ್ದು, ಪ್ರತಿಯೊಬ್ಬರಿಗೂ ಆಚರಿಸಲು ಮತ್ತು ಹಟ್ಟಿಯಲ್ಲಿ ಭಾಗವಹಿಸಲು ಆಹ್ವಾನವಾಗಿದೆ.

## 2. ಜಾಗರೂಕತೆ ಮತ್ತು ಸಕ್ರಿಯ ಪುನಃ ಸ್ಥಾಪನೆಗಾಗಿ ಕರೆ!

ಕುರುಬನ ಅಪೇಕ್ಷೆಯು ತೊಂಭತ್ತು ತೊಂಬತ್ತುಗಳು ಜಾಗರೂಕ ಮತ್ತು ಎಚ್ಚರಿಕೆ ಯಾಗಿರಬೇಕು. ಯಾರಾದರೂ ದೂರ ಹೋಗಲು ಪ್ರಾರಂಭಿಸಿದಾಗ ಮತ್ತು ಆ ವ್ಯಕ್ತಿಯನ್ನು ನಿಧಾನವಾಗಿ ಹಿಂದಕ್ಕೆ ಮಾರ್ಗದರ್ಶನ ಮಾಡಲು ಮೊದಲಿಗರು ಎಂದು ಕರೆಯಲಾಗುತ್ತದೆ. ತೊಂಬತ್ತೊಂಬತ್ತು ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದೆ. ಒಬ್ಬರು ಕಾಣೆಯಾಗಿದ್ದಾರೆಂದು ಕುರುಬನಿಗೆ ಹೇಗೆ ತಿಳಿಯುತ್ತದೆ ಖಂಡಿತವಾಗಿ, ಅವುಗಳಲ್ಲಿ ಒಂದು ಎಚ್ಚರಿಕೆಯನ್ನು ಕೊಟ್ಟಿರಬಹುದು. ಬಹುಶಃ ಕಳೆದು ಹೋದ ಕುರಿಯ ತಾಯಿ, ಸಹೋದರ, ಗೆಳೆಯ, ಅಜ್ಜಿಂದರು ಅಥವಾ ಪೋಷಕರು ಆಗಿರಬಹುದು. ಅದು ಹಳೆಯ ಕುರಿ ಆಗಿರಬಹುದು. ಬಹುಶಃ ಕಿರಿಯ ಕುರುಬನು ಗಮನಿಸಿ ಮಾಹಿತಿ ನೀಡಿರ ಬಹುದು.

ಉಳಿದ ತೊಂಭತ್ತುತೊಂಬತ್ತು ಎಚ್ಚರಿಕೆ ಯಾಗಿ ಇರಬೇಕೆಂದು ಯೇಸುಕ್ರಿಸ್ತನು ಅಪೇಕ್ಷ ಪಡುತ್ತಾನೆ. ತೊಂಭತ್ತು ತೊಂಬತ್ತರಲ್ಲಿ ನೀವು ಕೂಡ ಒಬ್ಬರೂ ಎಂದು ಅನಿಸಿದರೆ ಹಾಗಾದರೆ ಕಳೆದು ಹೋದದ್ದಕ್ಕೆ ನಿಮ್ಮ ಕರ್ತವ್ಯವಾಗಿದೆ. ನಮ್ಮ ಕುಟುಂಬದ ಸದಸ್ಯರ, ಸ್ನೇಹಿತರ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮ ಸಭೆಯ ಸಮುದಾಯದ ಬಗ್ಗೆ ನಾವು ಬಹಳ ಗಮನ ಹರಿಸಬೇಕು. ಅನೇಕ ಸಾರಿ ನಾವು ಅಂದುಕೊಳ್ಳುತ್ತೇವೆ ನಮ್ಮ ಸುತ್ತಮುತ್ತ ಇರುವವರು ನಂಬಿಕೆಯಲ್ಲಿ ಸುರಕ್ಷಿತರಾಗಿದ್ದರೆಂದು. ಆದರೆ ತೊಂಭತ್ತು ತೊಂಬತ್ತರಲ್ಲಿ ಕೂಡ ಕೆಲವರು ಅಲೆದಾಡುತ್ತಿರಬಹುದು. ಜಾಗರೂಕರಾಗಿರಿ!

ವೈರಿಗಳು ಬರುವುದನ್ನು ಕಾವಲುಗಾರನು ನೋಡಿದಾಗ, ಕೊಂಬನ್ನೂದಿ ಸ್ವಜನರನ್ನು ಎಚ್ಚರಿಸುತ್ತಾನೆ. (ಯೆಹಜ್ಕೇಲ್ 33:3-9).

ಅದೇ ಪ್ರಕಾರ, ತೊಂಬತ್ತೊಂಬತ್ತನೆಯ ಬದ್ಧತೆಯು ಅಧ್ಯಾತ್ಮಿಕ ತೃಪ್ತಿಯನ್ನು ತಡೆಯಲು ಸಹಾಯ ಮಾಡುತ್ತದೆ ಮತ್ತು ಸಮುದಾಯದ ಒಟ್ಟಾರೆ ಆರೋಗ್ಯವನ್ನು ಬಲಪಡಿಸುತ್ತದೆ. ದೇವರು ನಮ್ಮನ್ನು ಕಾವಲುಗಾರರನ್ನಾಗಿ ಇರಿಸಿರುವ ಸ್ಥಳಗಳಲ್ಲಿ ನಾವು ಜಾಗರೂಕರಾಗಿರೋಣ.

## 3. ಸಂತೃಪ್ತಿ ಮತ್ತು ಸ್ವನೀತಿಯ ವಿರೋಧವಾಗಿ ಎಚ್ಚರಿಕೆ!

ಕೆಲವು ಸಾರಿ, ತೊಂಭತ್ತೊಂಬತ್ತರ ಭಾಗವಾಗಿ - ಸುರಕ್ಷತೆಯ ಅನಿಸಿಕೆ ಸಂರಕ್ಷಣೆಯು ಸಂತೃಪ್ತಿಯ ಮತ್ತು ಸ್ವನೀತಿಗೆ ನಡೆಸುತ್ತದೆ. ನಾವು ಆಲೋಚಿಸುತ್ತವೆ. ಓ, ನಾನು ಸಮುದಾಯದ ಒಳಗಡೆ ಇದ್ದೇನೆ. ನಾನು ನಿರೀಕ್ಷಿಸಿರುವುದನ್ನು ಮಾಡುತ್ತಾ ಇದ್ದೇನೆ. ನಾನು ಕುರುಬನನ್ನು ಹಿಂಬಾಲಿಸಿ ವಿಧೇಯನಾಗುತ್ತಾ ಇದ್ದೇನೆ. ನಾನು ಅಲೆದಾಡುವವರ ತರಹ ಅಲ್ಲ ಏನೇ ಆಗಲಿ, ತೊಂಭತ್ತೊಂಬತ್ತರ ಸುರಕ್ಷತೆಯು ಸುಳ್ಳು ಪ್ರಜ್ಞೆಯನ್ನು ರಚಿಸುತ್ತದೆ. ಹಿಂಡಿನ ಭಾಗ ವಾಗಿರುವುದು ಒಂದು ಆಧ್ಯಾತ್ಮಿಕವಾಗಿ ರೋಗ ನಿರೋಧಕ ಅಥವಾ ಸ್ವಯಂ ಸಾಕಾಗುವುದಿಲ್ಲ.

(9 ನೇ ಪುಟಕ್ಕೆ)




**NEHEMIAH BIBLE COLLEGES,**

Chepauk & Santhoshapuram, Velachery Chennai.

Qualification : 10th Standard & above

**Rush for admission!** Medium : Tamil (Part Time) Hindi (Residential) (Sponsorship Available)

Diploma in Theology

Recognised by International Christian Leaders & Senior Pastors for the past 55 years

**Contact : The Chairman, Nehemiah Bible College.**

10, MOHAMMED ABDULLAH 2ND STREET, CHEPAUK, CHENNAI - 600 005, INDIA.

Phone : (+91-44) 2852 8282, Cell : (+91) 98410 71852 / 95661 31858

E.mail : sam@echoofhiscall.org / Website : www.echoofhiscall.org

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Great Commission Partners (Network of Pastors)
7. Training Programmes – Seminars & Retreats
8. Crusades
9. Literature Distribution and Follow Up
10. Gospel Printing Press - Publications
11. St. Paul's Matriculation School - Village English High School
12. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
13. **Early Morning Service : 5.30 a.m. Sunday**
14. **Preliminary Service : 8.00 a.m. Sunday**
15. **Tamil Service : 8.30 a.m. Sunday**
16. **Youth Meeting : 11.00 a.m. Sunday**
17. **Fellowship Lunch : 1.00 p.m. Sunday**
18. **Hindi Service : 4.00 p.m. Sunday**
19. **Telugu Service : 5.00 p.m. Sunday**
20. **English & Hindi Service : 6.00 p.m. Sunday**
21. Feedback Time : 7.30 p.m. Sunday
22. Women's Prayer : 5.30 p.m. Wednesday
23. Men's Prayer : 7.00 p.m. Friday
24. Discipleship Meeting : 6.00 p.m. Saturday
25. House Meetings : 6.30 p.m. Tuesday & Thursday
26. Special Holy Communion : 6.00 a.m. 1st day of each month
27. Ministers' Meeting : 6.00 p.m. First Saturday
28. Parents' Prayer : 4.00 p.m. First Sunday
29. Night Prayer : 9.30 p.m. Third Friday
30. Fasting Prayer : 9:30 a.m. Second Saturday
31. Holy Communion : Second Sunday Services
32. Youth / Kid Prayer : 10.00 p.m. daily (over phone)
33. Staff Devotion : 9.00 a.m. daily
34. Office : 9.00 a.m. to 9.00 p.m. (except Sundays)

## Echo of His Call Postal Courses for candidates in India

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a Course Book entitled **New Life – For You!** **After the completion of this course, you will get a certificate. There will be no compulsory fees. You will be blessed!** - Editor

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
**Echo of His Call, Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ 24:15)

## ಬಿಟ್ಟುಕೊಡಬೇಡಿರಿ! ಹಿಂತೆಗೆದುಕೊಳ್ಳಬೇಡಿ!

**ಆದರೆ ನನ್ನವನಾಗಿರುವ ನೀತಿವಂತನು ನಂಬಿಕೆಯಿಂದಲೇ ಬದುಕುವನು; ಅವನು ಹಿಂದೆಗೆದರೆ ಅವನಲ್ಲಿ ನನಗೆ ಸಂತೋಷವಿರುವುದಿಲ್ಲ ಎಂದು ಬರೆದಿದೆ. ನಾವಾದರೋ ಹಿಂದೆಗೆದವರಾಗಿ ನಾಶವಾಗುವವರಲ್ಲ, ನಂಬುವವರಾಗಿ ಪ್ರಾಣ ರಕ್ಷಣೆಯನ್ನು ಹೊಂದುವವರಾಗಿದ್ದೇವೆ** (ಇಬ್ರಿಯ 10:38-39).

ನನ್ನ ಸೇವೆಯ ಪ್ರಾರಂಭದ ದಿನಗಳಲ್ಲಿ, ನಾನು ಆಧಾರವಾಗುವದಕ್ಕೆ ಯಾವುದೇ ಮನುಷ್ಯನು ಸಹಾಯವಿರಲಿಲ್ಲ. ನಾನು ದೊಡ್ಡ ಸಮಸ್ಯೆಗಳನ್ನು ಎದುರಿಸಿದೆನು ಮತ್ತು ನಾನು ವಾಸಿಸುತ್ತಿದ್ದ ಜನರಿಂದ ಹೇಳಲಾಗದ ಕಷ್ಟಗಳನ್ನು ಸಹಿಸಿಕೊಂಡೆನು. ನಿದ್ರೆ ರಹಿತ ರಾತ್ರಿಗಳು ಮತ್ತು ಭಯಭೀತ ದಿನಗಳು ದೇವರು ನನ್ನನ್ನು ನಿಜವಾಗಿಯೂ ಕರೆದಿದ್ದಾನೆಯೇ ಅಥವಾ ನನ್ನ ಸ್ವಂತ ಇಚ್ಛೆಯಿಂದ ನಾನು ಸೇವೆಗೆ ಪ್ರವೇಶಿದ್ದಾನೆಯೇ ಎಂದು ಪ್ರಶ್ನಿಸುವಂತೆ ಮಾಡಿತು.

ನಾನು ಹಸಿವಿನಿಂದ ಬಳಲುತ್ತಿದ್ದ ಮತ್ತು ದೈಹಿಕ ದಾಳಿಯಿಂದ ಬಳಲುತ್ತಿದ್ದ ಸಂದರ್ಭಗಳಿವೆ. ಆದರೂ ದೇವರು ಮೌನವಾಗಿದ್ದನು. ನನ್ನ ಪ್ರಾರ್ಥನೆಗಳಿಗೆ ಆತನು ಉತ್ತರಿಸಲಿಲ್ಲ, ಅನೇಕ ಸನ್ನಿವೇಶಗಳಲ್ಲಿ, ನಾನು ತಿರಸ್ಕಾರ ಹೊಂದಿದ್ದೇನೆ ಎಂದು ಅಂದುಕೊಂಡೆನು. ಆದರೆ ದಿನಗಳ ಕಳೆದ ಹಾಗೆ, ಆತನ ಮೌನವು ಪ್ರಪಂಚ ಮತ್ತು ಅದರ ಜನರ ಬಗ್ಗೆ ನನಗೆ ಕಲಿಸುವ ಒಂದು ಉತ್ತರವಾಗಿದೆ ಎಂದು ನಾನು ಅರ್ಥಮಾಡಿಕೊಂಡೆ.

1879ರಲ್ಲಿ, ಕರ್ತನಾದ ಯೇಸುಕ್ರಿಸ್ತನ ಸುವಾರ್ತೆಯನ್ನು ಸಾರುವಾಗ ಘೋರವಾದ ವಿರೋಧವನ್ನು ಎದುರುಗೊಂಡೆನು. ಕೆಲವು ವ್ಯಕ್ತಿಗಳು ನನ್ನ ವಿರುದ್ಧ ಸುಳ್ಳು ಆರೋಪಗಳೊಂದಿಗೆ ಮಾಲೀಕರನ್ನು ಸಂಪರ್ಕಿಸಿ ನಾನು ಬಾಡಿಗೆ ಕಟ್ಟಡದಲ್ಲಿ ಪ್ರಾರ್ಥನಾ ಸಭೆಗಳನ್ನು ನಡೆಸುತ್ತಾ ಇದ್ದೇನೆಂದು. ಇನ್ನು ಮುಂದೆ ಅಲ್ಲಿ ಕೂಟಗಳನ್ನು ನಡೆಸುವುದನ್ನು ನಿಷೇಧಿಸುವಂತೆ ಅವರು ಅಕೆಯನ್ನು ಮನವರಿಕೆ ಮಾಡಿದರು.

ಎದೆಗುಂದಿದವನಾಗಿ, ಮನಗೆ ಹಿಂದಿರುಗಿದೆನು. ಕದವನ್ನು ಮುಚ್ಚಿಕೊಂಡು. ಅಡುಗೆ ಮನೆ ಮತ್ತು ಸ್ನಾನ ಮನೆಯಲ್ಲಿರುವ ಎಲ್ಲಾ ನಳಗಳನ್ನು ತೆರದು. ಜೋರಾಗಿ ಅತ್ತೆನು. ಕರ್ತನಿಗೆ ಕಣ್ಣೀರಿಟ್ಟೆನು. ನುಗ್ಗುತ್ತಿರುವ ನೀರು ಹೊರಗಿನ ಪ್ರಪಂಚದ ನನ್ನ ದುಃಖವನ್ನು ಮರೆ ಮಾಡಿತು. ಆದಾಗ್ಯ, ಇದು ಆದ ಮೇಲೆ ಕೂಡ, ದೇವರು ಮೌನವಾಗಿದ್ದನು.

ನನ್ನ ಜೀವತವನ್ನು ನಾನು ನೋಡುವಾಗ, ಒಂದು ಕಡೆಗೆ ನಾನು ಸವಾಲುಗಳನ್ನು, ಕಷ್ಟಗಳನ್ನು ನೋಡಿದೆನು ಮತ್ತು ಇನ್ನೊಂದು ಕಡೆಗೆ, ನನ್ನನ್ನು ಸೇವೆಗೆ ಕರೆದ ಯಜಮಾನನು ಸುಮ್ಮನೆ ನಿಂತುಕೊಂಡಿದ್ದಾನೆ. ನನಗೆ ಸಹಾಯ ಮಾಡಲು ಏನನ್ನೂ ಮಾಡುತ್ತಿಲ್ಲ. ಇದರ ಜೊತೆಯಲ್ಲಿ, ನನ್ನ ವಿರೋಧಿಗಳು ಬಲವುಳ್ಳವರಾದರು. ಸಾರ್ವಜನಿಕವಾಗಿ ನನ್ನನ್ನು ಹಾಸ್ಯ ಮಾಡಿದರು. ಅವರು ನಾನು ಕೆಲಸ ಮಾಡುವ ಸರ್ಕಾರಿ ಕಛೇರಿಗೆ ಪ್ರವೇಶ ಮಾಡಿದರು. ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಪ್ರಸಾರ ಮಾಡುತ್ತಾ ನನ್ನ ಸಹೋದ್ಯೋಗಿಗಳ ಮುಂದೆ ನನ್ನನ್ನು ದೂಷಿಸಿದರು. ನಾನು ತೀವ್ರವಾಗಿ ತೊಂದರೆಗೀಡಾಗಿದ್ದೆ, ಭಯ ಮತ್ತು ಅವರು ನನ್ನ ಮೇಲೆ ಉಂಟಾದ ಹಾನಿಯಿಂದ ಮುಳುಗಿದೆನು. ಆ ದಿನ, ಹತಾಶೆನಾಗಿ ಅತ್ತೆನು.

ಓ ಇಸ್ರಾಯಲ್‌ರ ದೇವರೇ, ಅಬ್ರಹಾಮ, ಇಸಾಕ, ಯಾಕೋಬರ ದೇವರೇ! ನಿನ್ನ ಮೌನವನ್ನು ನಾನು ಇನ್ನೂ ಸಹಿಸಿಕೊಳ್ಳುವದಕ್ಕೆ ಆಗುವುದಿಲ್ಲ! ನೀನು ನನ್ನ ಪರವಾಗಿ ಕಾರ್ಯವನ್ನು ಮಾಡದೇ ಹೋದರೆ, ಯಾರು ನನಗೆ ಸಹಾಯ ಮಾಡುವವರು? ನೀನು ನನ್ನನ್ನು ಸಂರಕ್ಷಿಸದೆ ಹೋದರೆ, ನಾನು ಎಲ್ಲಿಗೆ ಹೋಗಲಿ?

ಅದಾಗ್ಯೂ, ಯಾವುದೇ ಉತ್ತರವಿಲ್ಲ, ನಡೆಸುವಿಕೆ ಇಲ್ಲ, ಪ್ರೇರೇಪಣೆ ಇಲ್ಲ. ಕೇವಲ ಮೌನ. ನನ್ನ ಆತ್ಮವು ಬಹಳ ಗಲಿಬಿಲಿಯಾಗಿದೆ, ಆ ಒಂದು ರಾತ್ರಿ, ಹತಾಶೆಯಿಂದ, ನನ್ನ ಎಲ್ಲಾ ಮನೆಯ ಮತ್ತು ಸೇವೆಯ ಸಾಮಾನುಗಳನ್ನು ಪ್ಯಾಕ್ ಮಾಡಿದೆನು. ಎಲ್ಲವನ್ನು ಇಲ್ಲಿ ಬಿಟ್ಟು ಹೋಗುವದಕ್ಕೆ ತಯಾರು ಆಗಿ. ನನ್ನ ಸ್ವಂತ ಊರಿಗೆ ಹೋಗುವದಕ್ಕೆ.

**ಪ್ರತಿಯೊಬ್ಬ ವಿದೇಶೀಯನು ಹಿಂಸೆಯ ಖಡ್ಗದ ದೆಸೆಯಿಂದ ಸ್ವಜನದ ಕಡೆಗೆ ತಿರುಗಿಕೊಂಡು ಸ್ವದೇಶಕ್ಕೆ ಓಡಿಸ ಹೋಗುವನು.** ಯೆರೆಮೀಯ 50:16.

ಬೆಳಗಿನ ಜಾವ ಸರಿಯಾಗಿ 2 ಗಂಟೆಗೆ, ಯಾರೋ ನನ್ನ ಮನೆಯ ಬಾಗಿಲು ಬಡಿದ ಹಾಗೆ ಕೇಳಿಸಿತು. ನನ್ನ ಕೈಗಳು ನಡುಗುತ್ತಾ ಇದ್ದವು. ನಾನು ಅಸಹಾಯಕ ಮತ್ತು ಆತಂಕಕ್ಕೆ ಒಳಗಾದೆನು. ಅಂತಿಮವಾಗಿ, ಬಿಳಿಗಡ್ಡದಿಂದ ವಯಸ್ಸಾದ ವ್ಯಕ್ತಿಯನ್ನು ಹುಡುಕಲು ನಾನು ಬಾಗಿಲು ತೆರೆದೆನು. ಅವನ ಭುಜದ ಮೇಲೆ ಒಂದು ಚೀಲವನ್ನು ಹೊತ್ತುಕೊಂಡು ಆಹಾರದ ಭಾಗವಾಗಿತ್ತು.

ನೀನು ಯಾರು ಎಂದು ನಾನು ಕೇಳಿದೆನು? ಈ ಗಳಿಗೆಯಲ್ಲಿ ನಿಮ್ಮನ್ನು ಇಲ್ಲಿಗೆ ಏನು ತಂದಿತ್ತು? ನನ್ನ ಪ್ರಾರ್ಥನೆಗೆ ದೇವರು ಉತ್ತರಿಸದ ಕಾರಣ ನನ್ನ ಸ್ಥಳೀಯ ಸ್ಥಳಕ್ಕೆ ಮರಳಲು ನಾನು ತಯಾರಿ ನಡೆಸುತ್ತಿದ್ದೇನೆ ಎಂದು ನಾನು ಉಲ್ಲೇಖಿಸಿದೆನು. ಏನೇ ಹಾಗಲಿ, ಅವನು ಒಳಗೆ ಬರುವದಕ್ಕೆ ನನ್ನನ್ನು ಒತ್ತಾಯ ಮಾಡಿದನು. ನೆರಹೊರೆಯವರು ತಡವಾಗಿ ಬಂದ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸಿಕೊಳ್ಳಬಹುದು ಎಂದು ಹೇಳಿದನು. ನನಗೆ ಇಷ್ಟವಿಲ್ಲದೆ ಅವನನ್ನು ಒಳಗೆ ಆಹ್ವಾನಿಸಿದೆ.

ಆತನು ಈ ರೀತಿಯಾಗಿ ಹೇಳುವುದಕ್ಕೆ ಪ್ರಾರಂಭಿಸಿದನು. ನನ್ನ ಮಗ ಸ್ಯಾಮ್ ನಾನು ನಿನ್ನ ಸ್ನೇಹಿತ, ಪಾ. ಜೆ ಎಸ್ ಡೇನಿಯಲ್. ನಾವು ಭೇಟಿಯಾಗಿ ಬಹಳ ದಿನಗಳು ಆಯಿತು. ಬಹುಶಃ ನೀನು ನನ್ನನ್ನು ಮರೆತಿರಬಹುದು. ನಾನು ಪಟ್ಟಣದಲ್ಲಿ ಸೇವೆಯನ್ನು ಮುಗಿಸಿಕೊಡು ನನ್ನ ಹಳ್ಳಿಗೆ ಹೋಗುವದಕ್ಕೆ ತಯಾರಿ ಆಗಿದ್ದೆನು. ಆದರೆ ನಾನು ಕೊನೆಯ ಬಸ್ಸನ್ನು ತಪ್ಪಿಸಿಕೊಂಡೆನು. ನಾನು ಟ್ಯಾಕ್ಸಿಯ ಬಾಡಿಗೆಯನ್ನು ಕೊಡುವದಕ್ಕೆ ನನ್ನ ಹತ್ತಿರ ಹಣವಿಲ್ಲ ಅಥವಾ ರಾತ್ರಿ ಈ ಪಟ್ಟಣದಲ್ಲಿ ಮಲಗಿಕೊಳ್ಳಬೇಕು. ಚೆನ್ನೈನಲ್ಲಿರುವ ಮೌಂಟ್ ರಸ್ತೆಯಲ್ಲಿ ನಡೆಯುವಾಗ, ದೇವರು ನನ್ನೊಂದಿಗೆ ಮಾತನಾಡಿದನು. ಈ ರಾತ್ರಿ ನಿನ್ನನ್ನು ಹುಡುಕಲು ನನಗೆ ಸ್ಪಷ್ಟವಾಗಿ ನಿರ್ದೇಶನ ನೀಡಿದನು. ನೀನು ಈ ಸ್ಥಳವನ್ನು ಬಿಡಬಾರದು, ನಿನ್ನನ್ನು ಕರೆದ ದೇವರು ಮೌನವಾಗಿದ್ದನೆ ಎಂದು ಊಹಿಸಿ ಕೊಳ್ಳಬೇಡ. ಅತನು ಸಕ್ರಿಯವಾಗಿ ನಾಳಿನ ನಿನ್ನ ಉತ್ತಮಕ್ಕಾಗಿ ಸಿದ್ಧತೆಯನ್ನು ಮಾಡುತ್ತಾ ಇದ್ದಾನೆ. ನಿನ್ನ ಜೀವನದಲ್ಲಿ ಉತ್ತಮವಾದದ್ದನ್ನು ಸಾಧಿಸಲು ಆತನು ನಿನ್ನನ್ನು ತೀಕ್ಷ್ಣಗೊಳಿಸುತ್ತಾ ಇದ್ದಾನೆ. ನೀನು ನಂಬಿದ ಹಾಗೆ ಆತನು ಮೌನವಾಗಿಲ್ಲ. ಜ್ಞಾಪಕವಿಟ್ಟು, **ಯೆರೂಸಲೇಮಿನಿಂದ**

**ಯೆಹೋವನ ವಾಕ್ಯವೂ ಹೊರಡುವವು.** (ಯೆಶಾಯ 2:3 ಮೀಕ 4:2). ಈ ಪಟ್ಟಣವು ನಿನ್ನ ಯೆರೂಸಲೇಮು ಹಾಗಿದೆ. ಆದ್ದರಿಂದ, ಈ ಪಟ್ಟಣವನ್ನು ಬಿಟ್ಟು ಹೋಗಬೇಡ.

ಆತನನ್ನು ಪಾಲಿಸುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಮತ್ತು ಕರ್ತನು ಪ್ರೀತಿಸುತ್ತಾನೆಂದು ನಾನು ಭಾವಿಸಿದೆ ಮತ್ತು ನನ್ನಂತಹ ವಿನಮ್ರ ಸೇವಕನ ಜೀವನದಲ್ಲಿ ಆತನು ಕೆಲಸ ಮಾಡುವ ಅದ್ಭುತ ಮಾರ್ಗಗಳಿಗೆ ಸಾಕ್ಷಿಯಾಗಿದೆ. ನಾನು ಕರ್ತನಾದ ಯೇಸುಕ್ರಿಸ್ತನಲ್ಲಿ ಮತ್ತು ಪಾಸ್ಟರ್ ದ್ಯಾನಿಯಲರಲ್ಲಿ ಕ್ಷಮೆಯನ್ನು ಕೇಳಿಕೊಂಡೆನು. ಆಮೇಲೆ ನಾನು ಸೇವೆಯನ್ನು ಮುಂದುವರಿಸಿದೆನು. ದೇವರು ನನ್ನನ್ನು ಆಶೀರ್ವಾದ ಮಾಡಿದನು, ಕೆಲವು ತಿಂಗಳ ನಂತರ, ನಾನು ಯಶಸ್ವಿ ಸೇವಕನಾಗಿ ಮತ್ತೊಂದು ಸ್ಥಳಕ್ಕೆ ಆತನು ನನ್ನನ್ನು ಕರೆದೊಯ್ದನು.

ಪ್ರೀತಿಯ ಸಹೋದರ, ನಿಮ್ಮನ್ನು ಕರೆದಾತನು ಮರೆತು ಬಿಟ್ಟಿದ್ದಾನೋ ಏನೋ ಎಂದು ನೀವು ಆಲೋಚನೆ ಮಾಡುತ್ತಾ ಇದ್ದೀರಾ? ನಿಮ್ಮ ಬೆಳವಣಿಗೆ ತುಂಬಾ ನಿಧಾನವಾಗಿದೆ ಎಂದು ನೀವು ನಂಬಿದ್ದೀರಾ, ನಿಮ್ಮ ವೃತ್ತಿಯನ್ನು ಬದಲಾಯಿಸುವುದು ಅಥವಾ ಬೇರೆ ಸ್ಥಳಕ್ಕೆ ಹೋಗುವುದು ಉತ್ತಮ ಎಂದು? ಇಲ್ಲ, ನೀವು ಹಾಗೆ ಮಾಡಬಾರದು. ನಿಮ್ಮನ್ನು ಕರೆದ ಕರ್ತನು ನಂಬಿಗಸ್ತನಾಗಿದ್ದಾನೆ. ನೀವು ಎಲ್ಲವನ್ನು ಕಳೆದು ಕೊಂಡಾಗ್ಯೂ, ನಿಮ್ಮ ಭವಿಷ್ಯ ಹಾಗೆ ಇರುತ್ತದೆ. ಅದ್ಭುತ ಕಾರ್ಯಕ್ಕಾಗಿ ಅತನನ್ನು ನಂಬಿರಿ. ನಿಮ್ಮ ಜೀವನದಲ್ಲಿ ಏನಾದರೂ ಒಳ್ಳೆಯದು ಸಂಭವಿಸುತ್ತದೆ! **ಯೆಹೋವನನ್ನು ನಿರೀಕ್ಷಿಸಿಕೊಂಡಿರು; ದೃಢವಾಗಿರು; ನಿನ್ನ ಹೃದಯವು ಧೈರ್ಯದಿಂದಿರಲಿ; ಯೆಹೋವನನ್ನು ನಿರೀಕ್ಷಿಸಿಕೊಂಡೇ ಇರು.** (ಕೀರ್ತನೆ 27:14)

*************

*(6ನೇ ಪುಟದಿಂದ)*

ಸಾಮ್ಯವು ನಂಬಬಹುದಾದ ನೀತಿವಂತನಿಗೆ ಸವಾಲು ಮಾಡುತ್ತದೆ. ನನಗೆ ಪಶ್ಚಾತ್ತಾಪದ ಅವಶ್ಯಕತೆ ಇಲ್ಲ. ದೇವರ ಕೃಪೆ ಎಲ್ಲರಿಗೂ ಲಭ್ಯವಿದೆ ಎಂದು ಅವರಿಗೆ ನೆನಪಿಸುವ ಮೂಲಕ. ಸುರಕ್ಷತೆಯಲ್ಲಿ ಇರುವವರಿಗೆ ಕೂಡ. ದೇವರ ವಾಕ್ಯವು ಹೇಳಿದಾಗ, ಎಲ್ಲರು ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ (ರೋಮ 3:23). ಈ ಪ್ರಕಾರವಾಗಿ, ತೊಂಭತ್ತೊಂಬತ್ತು ಸ್ವನೀತಿ ಮತ್ತು ಹೆಮ್ಮೆಯ ಚಿಹ್ನೆಗಳಾಗಿ ನಮ್ಮ ಹೃದಯವನ್ನು ಪರೀಕ್ಷಿಸಲು ನಮ್ಮನ್ನು ಪ್ರೇರೇಪಿಸುತ್ತದೆ. ಆದಕಾರಣ ನಿಂತಿದ್ದೇನೆಂದು ನೆನಸುವವನು ಬಳದಂತೆ ಎಚ್ಚರಿಕೆಯಾಗಿರಲಿ (1 ಕೋರಿಂಥ 10:12).

ಪ್ರೀತಿಯ ಸ್ನೇಹಿತರೇ, ಕಳೆದು ಹೋದವನ್ನು ಹುಡುಕುವ ಕುರುಬನನ್ನು ನಾನು ಆಳವಾಗಿ ಮೆಚ್ಚುತ್ತೇನೆ. ತೊಂಬತ್ತೊಂಬತ್ತರ ವಿಶ್ವಾಸಕ್ಕಾಗಿ ನಾನು ಅಷ್ಟೇ ಕೃತಜ್ಞನಾಗಿದ್ದೇನೆ. ಅವರು ಸುರಕ್ಷತೆ ಆಗಿದ್ದರು ಕೂಡ, ಯೇಸುಕ್ರಿಸ್ತನು ಅವರಿಗೆ ಸುರಕ್ಷತೆಯ ಸುಳ್ಳು ಪ್ರಜ್ಞೆಗೆ ಬರಬಾರದೆಂದು ಸವಾಲ್ ಹಾಕುತ್ತಾನೆ. ಹಿಂಡಿನಲ್ಲಿರುವ ತಮ್ಮ ಸ್ಥಾನವು ಉಡುಗೊರೆಯಾಗಿದೆ ಎಂದು ಅವರು ಗುರುತಿಸಬೇಕು. ಅದಕ್ಕೆ ನಮ್ರತೆ ಬೇಕು ಮತ್ತು ನಿರಂತರವಾದ ಪಶ್ಚಾತ್ತಾಪದ ಕಾಪಾಡುವಿಕೆ. ನಿಷ್ಠಾವಂತರಿಗೆ ಸಹ ನಿರಂತರವಾಗಿ ನವೀಕರಣ ಮತ್ತು ದೇವರ ಕೃಪೆಯ ಮೇಲೆ ಅವಲಂಬಿಸುವ ಅಗತ್ಯವಿರುತ್ತದೆ ಎಂಬ ಜೀವಂತ ಜ್ಞಾಪನೆಯಾಗಿ ಕಾರ್ಯನಿರ್ವಹಿಸುವುದು ಅವರ ಪಾತ್ರವಾಗಿದೆ. ಒಂದಕ್ಕೋಸ್ಕರ ತೊಂಭತ್ತುತೊಂಬತ್ತು ಪ್ರಾರ್ಥನೆ ಮಾಡಬೇಕು!

*************

**URGENT NEED for CHRISTIAN OFFICE**

**1. COMPUTER OPERATORS**

**2. PRINTING PRESS OPERATORS**

**Contact : (+91) 98412 71858, E.mail : sam@echoofhiscall.org**

**NOTICE**

Please store the Mobile Phone numbers (+91) 98410 71858, (+91) 98412 71858 of Pastor S. Sam Selva Raj on your mobile phones.

\- Editor

## ಆತನ ಕರೆಯ ಪ್ರತಿಧ್ವನಿ YouTube ದೈನಂದಿನ ಧ್ಯಾನದ ಪ್ರತಿಕ್ರಿಯೆಗಳು!

LIKE COMMENT



ಸಹೋ. ಶಶಿ ತಿವಾರಿ



ಸಹೋ. ಮೇರಿ ಸುಸನ್ನಾ

(i) **ಸಹೋ. ಸ್ಟೀಫನ್ ರಾಮಣ್ಣ, ದಕ್ಷಿಣ ಆಫ್ರಿಕಾ**
ವ್ಹಾ! ಈ ಹೊತ್ತು ಮುಂಜಾನೆ ಎಂತಹ ಅದ್ಭುತವಾದ ಸಂದೇಶ.
ನಾನು ನಿಜವಾಗಿ ಆಶೀರ್ವಾದವನ್ನು ಹೊಂದಿಕೊಂಡೆನು.

(ii) **ಸಹೋದರ ಶಶಿ ತಿವಾರಿ, ಮುಂಬೈ,**
ಧ್ಯಾನದ ಪ್ರೋತ್ಸಾಹಕ್ಕಾಗಿ ಧನ್ಯವಾದಗಳು.
ಅನುದಿನವೂ ಧ್ಯಾನಕ್ಕಾಗಿ ಮತ್ತು ಅನುವಾದಕರಿಗಾಗಿ ಪ್ರಾರ್ಥನೆ ಮಾಡುತ್ತೇನೆ.

(iii) **ಸಹೋದರ ಸೌಲ್ ಬೆಂಜಮಿನ್ ಶಿಂಧೆ, ಫಾಲ್‌ಘರ್**
ದೇವರಿಗೆ ಸ್ತೋತ್ರ ಪಾಸ್ಟರ್, ನಾನು ಯೂಟುಬ್‌ನಲ್ಲಿ ಬರುವ ನಿಮ್ಮ ಸಂದೇಶಗಳನ್ನು ಅನುಸರಿಸುತ್ತಾ ಇದ್ದೇನೆ. ನಿಮ್ಮ ಸಂದೇಶಗಳ ಮೂಲಕ ದೇವರು ನನ್ನನ್ನು ಆಶೀರ್ವದಿಸಿದ್ದಾನೆ.
ದೇವರಿಗೆ ಸ್ತೋತ್ರ ಮತ್ತು ದೇವರು ನಿಮ್ಮನ್ನು ಹೆಚ್ಚಾಗಿ ಆಶೀರ್ವದಿಸಲಿ.

(iv) **ಸಹೋದರಿ ಮೇರಿ ಸುಸನ್ನಾ, ವೈಜಾಗ್**
ಬೆಳಗಿನ ಯೂಟುಬ್ ಸಂದೇಶಗಳಿಗಾಗಿ ಧನ್ಯವಾದಗಳು. ನಾನು ನಿಜವಾಗಿ ಆಶೀರ್ವದಿಸಲ್ಪಟ್ಟಿದ್ದೇನೆ.



ಸಹೋ. ಸ್ಟೀಫನ್ ರಾಮಣ್ಣ



ಸಹೋ ಸೌಲ್ ಬೆಂಜಮಿನ್ ಶಿಂಧೆ

Posted at "Egmore RMS Patrika Channel" RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**
Please subscribe

Kindly view and subscribe our **Echo of His Call YouTube Channel** when you get time. Thanks.

**- Editor**

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**
*****
**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps **(Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.)** to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

ECHO OF HIS CALL
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.org

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/24-26**
**WPP NO. TN/PMG(CCR)/WPP- 219/24-26**
**Date of Publication: Second week of every month**
**Date of Posting : 9th & 10th of every month**
**Posted at "Egmore RMS Patrika Channel"**
**on 10th** MAY 2025.
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**